ಓ.ಎಸ್. ನಂ. 103/2021
ಪಿ. ಡಬ್ಲ್ಯೂ-2

<u>ದಿನಾಂಕಃ **04-12-2023**</u>
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಬಿ ಪಿ ವಕೀಲರಿಂದ:</u>

ನಾನು ಕೂಲಿ ಕೆಲಸ ಮಾಡುತ್ತೇನೆ. ರಾಮಲಿಂಗಪ್ಪ ನನಗೆ ಗೊತ್ತು ಆತನು ಈಗ 7-8 ವರ್ಷಗಳ ಹಿಂದೆ ತೀರಿಕೊಂಡಿರುತ್ತಾನೆ. ರಾಮಲಿಂಗಪ್ಪನಿಗೆ ಇಬ್ಬರು ಹೆಂಡತಿಯರು. ಮೊದಲನೆ ಹೆಂಡತಿ ಹೆಸರು ವೆಂಕಟಮ್ಮ ಎರಡನೆ ಹೆಂಡತಿ ಹೆಸರು ದೇವಕಮ್ಮ ವೆಂಕಟಮ್ಮ ಸುಮಾರು 25-30 ವರ್ಷಗಳ ಹಿಂದೆ ತೀರಿಕೂಂಡಿರುತ್ತಾಳೆ. ಆತನಿಗೆ ಬೇರೆ ಬೇರೆ ಸರ್ವೆ ನಂಬರಗಳಲ್ಲಿ 6-7 ಎಕರೆ ಜಮೀನು ಇತ್ತು. ಸದರಿ ಆಸ್ತಿಗಳು ಮೌನಪ್ಪನ ಹೆಸರಿನಲ್ಲಿತ್ತು ಎಂದರೆ 1 ನೇ ಪ್ರತಿವಾದಿಯ ಮಾವನ ಹೆಸರಿನಲ್ಲಿತ್ತು ಅವನು ಸತ್ತ ನಂತರ 1 ನೇ ಪ್ರತಿವಾದಿಯ ಗಂಡ ಗಂಗಪ್ಪನ ಹೆಸರಿನಲ್ಲಿ ಬಂತು. ತಂದೆಯಿಂದ ಮಗನ ಹೆಸರಿಗೆ ಆಸ್ತಿಯು ಹಸ್ತಾಂತರ ಹೊಂದಿರುವುದಿಲ್ಲ. ತಾತನಿಂದ ಮೊಮ್ಮಗನಿಗೆ ಏಕೆ ವರ್ಗಾವಣೆ ಆಯಿತು ಎಂದರೆ ನನಗೆ ಸ್ವಂತಕೆ ಮಾಹಿತಿ ಇರುವುದಿಲ್ಲ. ಯಾವ ವರ್ಷದಲ್ಲಿ ಗಂಗಪ್ಪನಿಗೆ ಆಸ್ತಿಯು ಹಸ್ತಾಂತರ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ. ಅವರ ಆಸ್ತಿಗಳ ಬಗ್ಗೆ ಅವರ ಮನೆತನದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಅವರು ಮನೆ ಮತ್ತು ನಮ್ಮ ಮನೆಗೆ ಸುಮಾರು 10 ಮನೆಗಳ ಅಂತರ ಇದೆ. ದೇವಕಮ್ಮ ವಾದಿಯ ಆಸ್ತಿ ಮಾರಾಟ ಮಾಡಿ ಹಣ ಪಡೆದುಕೊಂಡ ವಿಷಯ ನನಗೆ ಮಾಹಿತಿ ಇರುವುದಿಲ್ಲ. ಯಾವ ಆಸ್ತಿಯ ಮೇಲೆ ದಾವೆ ಮಾಡಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯವರಿಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿಯರೆ ದಾವಾ ಆಸ್ತಿಯಲ್ಲಿ ಸ್ವಾಧೀನ ಇದ್ದು ಅನುಭೂಗಸ್ಥರಿದ್ದಾರೆ ಎಂದರೆ ಸರಿಯಲ್ಲ. ಬೇರೆಯವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೈರವಿ ಕೆಲಸ ಅಂದರೆ ದಾಖಲೆಗಳನ್ನು ಬರೆಯುವುದು ಮತ್ತು ಇತರರಿಗೆ ಮಾಹಿತಿ ಕೊಡುವ ವಿಷಯ

ಮಾಡುತ್ತಿದ್ದೇನೆ ಎಂದರೆ ಸರಿ. ವಾದಿ ಕಡೆಯಿಂದ ಹಣ ಪಡೆದುಕೊಂಡು ನಾನು ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ